

# ಎವರ್‌ಗ್ರೀನ್ ಡೆನಿಮ್

ಜೀನ್ಸ್ ಉಡುಪನ್ನೇ ಹೋಲುವ, ಆದರೆ ಹೆಚ್ಚು ಪರಿಸರಸ್ನೇಹಿಯಾದ ಡೆನಿಮ್ ಉಡುಪು ಈಗ ಫ್ಯಾಷನ್ ಲೋಕದಲ್ಲಿ 'ಎವರ್‌ಗ್ರೀನ್' ಆಗಿದೆ.

■ **ಉಮಾ ಅನಂತ್**

ಸಾಮಾನ್ಯವಾಗಿ ಆಧುನಿಕ ಮನೋಭಾವದ ಯುವತಿಯರನ್ನು ಸೆಳೆಯುವುದು ಜೀನ್ಸ್ ಪ್ಯಾಂಟ್, ಶರ್ಟ್, ಸ್ಕರ್ಟ್... ಇತ್ಯಾದಿ. ಜೀನ್ಸ್ ಉಡುಪನ್ನೇ ಹೋಲುವ ಡೆನಿಮ್ ಉಡುಪು ಇದೀಗ ಜೀನ್ಸ್‌ಗೆ 'ಪರ್ಯಾಯ' ಎನ್ನುವಷ್ಟು ಪ್ರಖ್ಯಾತವಾಗಿದೆ. ಇದಕ್ಕೆ ಕಾರಣ ಡೆನಿಮ್ ಉಡುಗೆಯ ಬಣ್ಣ ಮಾಸದ, ನೆರಿಗೆ, ಸುಕ್ಕು ಆಗದೆ ಇರುವ ಗುಣ ಹಾಗೂ ತರಹೇವಾರಿ ವೈವಿಧ್ಯಗಳು.

ಇದೇ ಕಾರಣಕ್ಕೆ ಸೆಲೆಬ್ರಿಟಿಗಳು, ಮಾಡೆಲಿಂಗ್ ತಾರೆಯರು ಡೆನಿಮ್ ಉಡುಗೆಯತ್ತ ಚಿತ್ತ ಹರಿಸಿದ್ದಾರೆ. ಡೆನಿಮ್ ಉಡುಪು ಧರಿಸಲು ಆರಾಮದಾಯಕ, ಫ್ಯಾಷನ್ ಹಾಗೂ ಟ್ರೆಂಡಿ ಲುಕ್ ಕೊಡುತ್ತದೆ, ಕೈಗೆಟಕುವ ಬೆಲೆಯಲ್ಲೂ ಲಭ್ಯ ಅಲ್ಲದೆ ಇದು ಫ್ಯಾಷನ್ ಆಗಿಯೂ ಕ್ಯಾಶುವಲ್ ಉಡುಪಾಗಿಯೂ, ನಿತ್ಯ ಕಚೇರಿಗೆ ತೆರಳುವ ಮಹಿಳೆ– ಪುರುಷರು ಧರಿಸಲು ಯೋಗ್ಯವಾಗಿದೆ ಎಂಬುದು ಇದರ ಪ್ಲಸ್‌ಪಾಯಿಂಟ್. ಇದೀಗ ಡೆನಿಮ್‌ನಲ್ಲಿ ಸ್ಕರ್ಟ್, ಜಾಕೆಟ್, ಕೋಟ್ ಮುಂತಾದವು ಲಭ್ಯ. ಇದರ ಜೊತೆಗೆ ಡೆನಿಮ್ ಬ್ಯಾಗ್, ಶೂಗಳಂತಹ ಆಕ್ಸೆಸರೀಸ್ ಕೂಡ ಸಿಗುತ್ತದೆ.

ಹದಿ ವಯಸ್ಸಿನ ಹುಡುಗಿಯರಿಂದ ಹಿಡಿದು ಫ್ಯಾಷನ್ ಬಯಸುವ ಮುದುಕಿಯರವರೆಗೂ ಇಂದು ಡೆನಿಮ್ ಉಡುಪಿನ ಬೆನ್ನು ಹತ್ತಿದ್ದಾರೆ. ಆಧುನಿಕ ಜೀವನಶೈಲಿಗೆ ಸರಿಹೊಂದುವಂತಹ ತರಾವರಿ ಉಡುಗೆಗಳು ಫ್ಯಾಷನ್ ಟ್ರೆಂಡ್ ಸೃಷ್ಟಿಸುತ್ತಿದೆ. ಸಿಂಥೆಟಿಕ್ ಉಡುಪು ಕೆಲವೊಮ್ಮೆ ಔಟ್‌ಡೇಟೆಡ್ ಆಗುವುದುಂಟು. ಆದರೆ ಡೆನಿಮ್ ಮತ್ತು ರೇಷ್ಮೆ ಎಂದಿಗೂ ಔಟ್ ಆಫ್ ಫ್ಯಾಷನ್ ಆಗುವುದೇ ಇಲ್ಲ ಎಂಬುದು ಫ್ಯಾಷನ್ ತಜ್ಞರ ಅಭಿಮತ. ಜತೆಗೆ ಬಡವರಿಂದ ಹಿಡಿದು ಶ್ರೀಮಂತರ ವರೆಗೆ ಯಾರು ಬೇಕಾದರೂ ಡೆನಿಮ್ ಬಟ್ಟೆ ಧರಿಸಿ ಖುಷಿ ಪಡಬಹುದು. ಡೆನಿಮ್ ಉಡುಪಿನ ಬೆಲೆ 100 ರೂಪಾಯಿಯಿಂದ ಆರಂಭವಾಗಿ 10 ಸಾವಿರ ರೂಪಾಯಿಗಳವರೆಗೂ ಇದೆ.

ಡೆನಿಮ್‌ನಲ್ಲಿ ಹಲವು ವೈವಿಧ್ಯಗಳಿವೆ. ಸಾಮಾನ್ಯವಾಗಿ ಎಲ್ಲ ಸ್ಟ್ರೆಚ್ ಡೆನಿಮ್‌ಗಳು ಲಿಕ್ರಾ ಹೆಸರಿನಲ್ಲಿ ಬರುತ್ತಿದ್ದು, ಕೂಲ್‌ಮ್ಯಾಕ್ಸ್ ಕೋರ್, ಕೂಲ್‌ಮ್ಯಾಕ್ಸ್ ಆಲ್ ಸೀಸನ್, ಲಿಕ್ರಾ ಡ್ಯುಯೆಲ್ ಎಫ್‌ಎಕ್ಸ್ ಮತ್ತು ಲಿಕ್ರಾ ಬ್ಯೂಟಿ.. ಹೀಗೆ ಗ್ರಾಹಕರನ್ನು ಸೆಳೆಯುತ್ತಿವೆ. ಈ ಎಲ್ಲಾ ಉತ್ಪನ್ನಗಳು ಬಾಳಿಕೆ ಬರುವ ಡೆನಿಮ್ ವೈವಿಧ್ಯಗಳು.

## ಪರಿಸರಸ್ನೇಹಿ

ಡೆನಿಮ್‌ನ ಮತ್ತೊಂದು ವಿಶೇಷ ಗುಣ ಎಂದರೆ ಅದು ಪರಿಸರಸ್ನೇಹಿ. ಡೆನಿಮ್ ಬಟ್ಟೆ ತಯಾರಿಸಲ ವಿವಿಧ ಗಿಡಗಳ ಉತ್ಪನ್ನಗಳನ್ನು ಬಳಸಲಾಗುತ್ತದೆ. ನ್ಯಾಚುರಲ್ ಇಂಡಿಗೊ, ಮಾಡ್ಡರ್, ರೀಮ್, ಇಮೋದಿ ಹಾಗೂ ಹರ್ದಾ ಎಂಬ ಮರಗಳ ಸತ್ವವನ್ನು ಉಪಯೋಗಿಸಿ ಬಟ್ಟೆ ತಯಾರಿಸಲಾಗುತ್ತದೆ. ಜತೆಗೆ ನೈಸರ್ಗಿಕ ಡೈಯಿಂಗ್ ಅನ್ನೂ ಬಳಸಿ ಡೆನಿಮ್ ಬಟ್ಟೆಗೆ ಅಂತಿಮ ರೂಪ ನೀಡಲಾಗುತ್ತದೆ.

'ಡೆನಿಮ್ ಬಟ್ಟೆಯ ಕೆಲ ವೈವಿಧ್ಯ 'ಅಗ್ನಿ ನಿರೋಧಕ' ಗುಣವನ್ನೂ ಹೊಂದಿದೆ. ಈ 'ಫೈರ್ ಪ್ರೊಟೆಕ್ಟಿವ್' ಗುಣದಿಂದಾಗಿ ಡೆನಿಮ್ ಅನ್ನು ಯಾವ ಕಾಲದಲ್ಲೂ ಬಳಸಬಹುದು. ಅಲ್ಲದೆ ಈ ಬಟ್ಟೆ ಬಳಸಿ ಬಳಸಿ ಬೇಜಾರಾದರೆ ಹಾಗೇ ಇಟ್ಟು 10 ವರ್ಷಗಳ ನಂತರ ಮರುಬಳಕೆ ಮಾಡಿಯೂ ಬಳಸಬಹುದು' ಎನ್ನುತ್ತಾರೆ ಫ್ಯಾಷನ್ ತಜ್ಞೆ ಶ್ಯಾಮಲಾ.

ಡೆನಿಮ್ ಪ್ಯಾಂಟ್‌ಗಳು ಜೀನ್ಸ್‌ನಂತೆ ಸ್ಕಿನ್ ಟೈಟ್ ಅಲ್ಲ. ಅಲ್ಲದೆ ಈ ಫ್ಯಾಬ್ರಿಕ್‌ನಲ್ಲಿ